

ಡರಬನ್ ರೇವುಪಟ್ಟಣಕ್ಕೆ ಹರಿಲಾಲ ಬರುತ್ತಾರೆ. ಅಲ್ಲಿನ ಕಪ್ಪುಜನರ ಜೊತೆಗೆ ಭಾರತೀಯರು ಓಡಾಡಿಕೊಂಡಿರುತ್ತಾರೆ. ಎತ್ತರದ ಹಾಗೂ ಬಿಳಿ ಬಣ್ಣದ ಆಂಗ್ಲ ಅಧಿಕಾರಿಗಳು ದರ್ಪದಿಂದ ಓಡಾಡುತ್ತಿರುವಾಗ ಕರಿಯರು ಸರಿದು ನಿಲ್ಲುತ್ತಿದ್ದರು. ಇದನ್ನು ನೋಡಿ ಹರಿಲಾಲರಿಗೆ ಆಶ್ಚರ್ಯವಾಗುತ್ತದೆ. ಬಾಪೂ ಈಗ ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ ಎನ್ನುವ ಸಂಗತಿಯನ್ನು ಹರಿಲಾಲ ಪರಾಗರಿಗೆ ತಿಳಿಸುತ್ತಾರೆ. 'ಇಂಡಿಯನ್ ಒಪೀನಿಯನ್' ಎಂಬ ಆಂಗ್ಲಭಾಷೆಯ ಪತ್ರಿಕೆಯಲ್ಲಿ ಬಾಪೂ ಅಂಕಣ ಬರೆಯಲಾರಂಭಿಸುತ್ತಾರೆ. ಇದೇ ಕಚೇರಿಗೆ ಹರಿಲಾಲ ಕೂಡ ಹೋಗಲಾರಂಭಿಸುತ್ತಾರೆ. ಅಲ್ಲೇ ಆಶ್ರಮದಲ್ಲಿ ಇವರ ವಾಸ. ಆಶ್ರಮದಲ್ಲಿ ಕೊಡುವ ಬ್ರೆಡ್ ಅನ್ನೇ ಚಹಾದಲ್ಲಿ ಅದ್ದಿ ಚಪ್ಪರಿಸಿ ತಿನ್ನುತ್ತಾರೆ. ಹರಿಲಾಲ ಪತ್ರಿಕೆಗಾಗಿ ತಡರಾತ್ರಿವರೆಗೂ ದುಡಿಯುತ್ತಾರೆ. ಅಚ್ಚಾದ ಪತ್ರಿಕೆಗಳನ್ನು ಕಟ್ಟುವುದು, ಪಾರ್ಸಲ್ ಮಾಡುವುದರಲ್ಲೇ ಹರಿಲಾಲ ಪುಳಕಗೊಳ್ಳುತ್ತಿದ್ದರು.

ಇತ್ತಕಡೆ ಗುಲಾಬ ಮುಂಬಯಿಯಿಂದ ದಕ್ಷಿಣ ಆಫ್ರಿಕಾ ಎಷ್ಟು ದೂರ ಇದೆ ಎಂಬುದನ್ನು ಭೂಗೋಳದ ಪುಸ್ತಕ ನೋಡಿ ತಿಳಿಯುವ ಪ್ರಯತ್ನ ಮಾಡುತ್ತಾಳೆ. ಇಪ್ಪತ್ತು ದಿನ ಹಡಗಿನಲ್ಲಿ ಪ್ರಯಾಣಿಸಿದರೆ ಆ ದೇಶ ಸಿಗುತ್ತದೆ ಎಂಬ ವಿಚಾರ ತಿಳಿದು ಗುಲಾಬಳಿಗೆ ಭಯ ಹಾಗೂ ಪುಳಕ ಮಿಶ್ರಿತ ಸಂವೇದನೆ ಉಂಟಾಗುತ್ತದೆ. ಬಾ ಮತ್ತು ಬಾಪೂ ಇಬ್ಬರೂ ಗುಲಾಬಳ ಮೇಲೆ ವಾತ್ಸಲ್ಯದ ಹೊಳೆ ಹರಿಸಿದಾಗ ಗುಲಾಬ ಕೂಡ ಭಾವುಕಳಾಗುತ್ತಾಳೆ.

ಪರೀಕ್ಷೆ ಇದೇ ಆಗಿದೆ. ಆದರೆ ನೀನೀಗ ಫೀನಿಕ್ಸ್ ಆಶ್ರಮದಲ್ಲಿದ್ದು 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಕೆಲಸದಲ್ಲಿ ಸಹಾಯವನ್ನು ಮಾಡು. ಮುಂದೆ ದೇವರು ತೋರಿಸಿದ ಹಾದಿಯಲ್ಲಿ ಸದ್ಬುದ್ಧಿ ಮತ್ತು ನಿಷ್ಠೆಯೊಂದಿಗೆ ಹೋರಾಟದಲ್ಲಿ ಖಂಡಿತ ಭಾಗವಹಿಸು.'

ಹರಿಲಾಲ ಜೋಹಾನ್ಸ್‌ಬರ್ಗ್‌ನಿಂದ ಫೀನಿಕ್ಸ್ ಆಶ್ರಮಕ್ಕೆ ಮರಳಿ ಬಂದ. ಆದರೆ ಅವನ ಹಣೆಯಲ್ಲಿ ಫೀನಿಕ್ಸ್ ಆಶ್ರಮದಲ್ಲಿ ಹೆಚ್ಚು ದಿನ ಇರುವುದು ಬರೆದಿರಲಿಲ್ಲ. ಬಾಪೂ ಅವರನ್ನು ಭೇಟಿಯಾಗಿ ಹೆಚ್ಚು ದಿನಗಳಾಗಿರಲಿಲ್ಲ; ಸರ್ಕಾರದೊಂದಿಗೆ ಒಪ್ಪಂದವಾಗುವ ಸುದ್ದಿಯಿಂದ ಹೋರಾಟಕ್ಕೆ ಸ್ವಲ್ಪ ಚುರುಕು ಬಂದಿತ್ತು; ಆದರೆ ಆಗಲೇ ಜೋಹಾನ್ಸ್‌ಬರ್ಗ್‌ನಲ್ಲಿ ಬಾಪೂ ಅವರ ಮೇಲೆ ಘಾತಕ ಆಕ್ರಮಣ ಆದ ಬಗ್ಗೆ ಸುದ್ದಿ ಬಂತು. ಇಡೀ ಆಶ್ರಮದಲ್ಲಿ ಕೋಲಾಹಲವುಂಟಾಯಿತು. ಇವೆಲ್ಲವೂ ಆಕಸ್ಮಿಕವಾಗಿದ್ದವು. ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಂಬಂಧಿಸಿದಂತೆ ಬಾಪೂ ಹಾಕಿದ್ದ ಶರತ್ತುಗಳು ದೇಶದ ಕೆಲವು ಜನರಿಗೆ ಪೂರ್ಣವಾಗಿ ತೃಪ್ತಿ ತಂದಿರಲಿಲ್ಲ. ಇದು ಎಲ್ಲರಿಗೂ ತಿಳಿದಿತ್ತು, ಅಲ್ಲದೆ ಸರ್ಕಾರದ ಮಾತನ್ನು ನಂಬಲು ಬಹಳಷ್ಟು ಭಾರತೀಯರು ಸಿದ್ಧರಿರಲಿಲ್ಲ. ಬಾಪೂ ಎದುರು ಅನೇಕ ಸಮಸ್ಯೆಗಳಿದ್ದವು.

ಸರ್ಕಾರದ ಹಿಂದಿನ ನಡೆಯನ್ನು ನೋಡಿದಾಗ ಆ ಬಗ್ಗೆ ನಂಬುವುದು ಕಷ್ಟವಾಗಿತ್ತು. ಅಲ್ಲದೆ ಬಾಪೂ, ಎದುರು ಪಕ್ಷದ ಬಗ್ಗೆ ಅವಿಶ್ವಾಸವನ್ನು ತೋರಲು ಬಯಸುತ್ತಿರಲಿಲ್ಲ. ತಾವು ಹೇಳಿದ ಒಪ್ಪಂದವನ್ನು ಮೊಟ್ಟ ಮೊದಲು ತಾವೇ ಒಪ್ಪಿಕೊಳ್ಳುತ್ತೇವೆ ಎಂಬ ಶ್ರದ್ಧೆಯಿಂದ ಬಾಪೂ ಅವರು ಭಾರತೀಯ ಸಮಾಜದೆದುರು ಒಪ್ಪಂದದ ಮಾರ್ಗದಲ್ಲಿ ಬರುವ ಅಡಚಣೆಗಳನ್ನು ದೂರ ಮಾಡಲು ಪ್ರಯತ್ನಿಸಿದ್ದರು. ಆದರೆ ಈ ಪ್ರಯಾಸ ಯಶಸ್ವಿಯಾಗಿರಲಿಲ್ಲ. ಇದರಿಂದಾಗಿಯೇ ಅವರ ಮೇಲೆ ಆಕ್ರಮಣ ನಡೆಯಿತು. ಆಕ್ರಮಣ ಮಾಡಿದವನು ವಿರೋಧ ಪಕ್ಷದವನಾಗಿರದೆ, ಹೋರಾಟದಲ್ಲಿ ಭಾಗವಹಿಸಿದ್ದ ಬಾಪೂ ಅವರ ಜೊತೆಯಲ್ಲಿದ್ದ ಒಬ್ಬ ಪಠಾಣ ಆವೇಶಕ್ಕೊಳಗಾಗಿ, ಮಾರ್ಗದಲ್ಲಿ ಬಾಪೂ ಅವರ ಮೇಲೆ, ಅವರ ಕಚೇರಿಯ ಸಮೀಪದಲ್ಲಿಯೇ ಲಾಠಿಗಳಿಂದ ಆಕ್ರಮಣ ಮಾಡಿದ್ದ; ಅವರನ್ನು ರಕ್ತಮಯ ಸ್ಥಿತಿಯಲ್ಲಿ ಬಿಟ್ಟು ಹೋಗಿದ್ದ.

ಫೀನಿಕ್ಸ್ ಆಶ್ರಮದಲ್ಲಿ ಚಿಂತೆಯ ಕಾರ್ಮೋಡ ಕವಿದಿತ್ತು. ಹರಿಲಾಲ ಒಂದಿಬ್ಬರು ಆಶ್ರಮವಾಸಿಗಳೊಂದಿಗೆ ಜೋಹಾನ್ಸ್‌ಬರ್ಗ್‌ನಲ್ಲಿದ್ದ ಬಾಪೂ ಅವರ ಬಳಿಗೆ ಬಂದ. ಬಾಪೂ ಅವರ ಹಾಸಿಗೆಯನ್ನು ಅಲ್ಲಿಯ ಬಿಳಿ ಪಾದರಿಯ ಮನೆಯಲ್ಲಿ ಹಾಕಲಾಗಿತ್ತು. ಹರಿಲಾಲನಿಗೆ ಆಶ್ಚರ್ಯವಾಯಿತು. ದೇಶದ ತಮ್ಮವರಿಗಾಗಿ ಬಾಪೂ ಅವರು ದೊಡ್ಡ ಅಪಾಯವನ್ನು ತಮ್ಮ ಹೆಗಲ ಮೇಲೆ ಹೊತ್ತಿದ್ದರು, ಆದರೆ ದೇಶದ ವ್ಯಕ್ತಿಯೊಬ್ಬ ಅವರ ಪ್ರಾಣವನ್ನು ತೆಗೆಯಲು ಪ್ರಯತ್ನಿಸಿದ್ದ; ಬಾಪೂ ವಿದೇಶಿ ಸರ್ಕಾರದೊಂದಿಗೆ ತಮ್ಮ ಜೀವವನ್ನು ಪಣಕ್ಕಿಟ್ಟು ಹೋರಾಡುತ್ತಿದ್ದರು, ಆದರೆ ಆ ದೇಶದ ವ್ಯಕ್ತಿಯೊಬ್ಬ ಅವರ ಜೀವವನ್ನು ಉಳಿಸಿ, ಅವರ ಆರೈಕೆ ಮಾಡಲು ತಮ್ಮ ಮನೆಗೆ ಕರೆದು ತಂದಿದ್ದ. ಹರಿಲಾಲ ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿದ.

'ಬಾಪೂ, ಈಗ ನೀವು ಹೇಗಿದ್ದೀರ?' ಹರಿಲಾಲ ಚಿಂತಿತನಾದ.

'ದೇವರ ದಯೆಯಿಂದ ಗಾಂಧಿ ಉಳಿದರು.' ಆ ಪಾದರಿ ಮಧ್ಯದಲ್ಲಿಯೇ ತಡೆದು ಹೇಳಿದ, 'ಕೊಲೆಗಡುಕರಿಗೆ ಶಿಕ್ಷೆಯಾಗಲೇ ಬೇಕು, ಇದನ್ನು ನಿಮ್ಮ ತಂದೆಯವರಿಗೆ ತಿಳಿಸಿ ಹೇಳು.'

'ನಿಮ್ಮ ಮಾತು ನಿಜ. ಬಾಪೂ ಅವರ ಮೇಲೆ ಕೈ ಮಾಡಿದವರಿಗೆ ಶಿಕ್ಷೆ ಕೊಡುವುದು ಸರ್ಕಾರದ ಕೆಲಸ.' ಹರಿಲಾಲ ಸ್ಪಷ್ಟಪಡಿಸಿದ.

'ಆದರೆ ಸರ್ಕಾರ ತನ್ನ ಕೆಲಸವನ್ನು ಮಾಡಲು ಬಿಡಬಾರದು ಎಂಬ ನಿರ್ಣಯವನ್ನು ಸ್ವತಃ ಗಾಂಧೀಜಿಯವರೇ ತೆಗೆದುಕೊಂಡಿದ್ದಾರೆ.' ಪಾದರಿ ನಕ್ಕ.

'ಪೊಲೀಸ್ ಅಧಿಕಾರಿಗಳು ಗಾಂಧಿಯವರಿಗೆ ಪದೇಪದೇ, 'ನೀವು ದೂರು ಕೊಡಿ, ಆಕ್ರಮಣ ಮಾಡಿದವರಿಗೆ ಕಾನೂನು ಪ್ರಕಾರ ಕಂಬಿ ಒಳಗೆ ಹಾಕಲಾಗುತ್ತದೆ' ಎಂದು ವಿನಂತಿಸಿಕೊಳ್ಳುತ್ತಿದ್ದಾರೆ. ಆದರೆ ಗಾಂಧೀಜಿಯವರು ದೂರು ಕೊಡಲು ಸಹ ಸಿದ್ಧರಿಲ್ಲ...'

'ಬಾಪೂ, ನಾನು ಇದೇನು ಕೇಳುತ್ತಿದ್ದೇನೆ?' ಹರಿಲಾಲನಿಗೆ ಆಘಾತವಾಯಿತು, 'ಯಾರು ನಿಮ್ಮ ಮೇಲೆ ಆಕ್ರಮಣ ಮಾಡಿ, ನಿಮ್ಮನ್ನು ಘಾಸಿಗೊಳಿಸಿದನೋ...'

'ಹರಿ, ಅವನಿಗೆ ತಿಳಿವಳಿಕೆ ಇಲ್ಲ,' ಬಾಪೂ ಶಾಂತಚಿತ್ತದಿಂದ ಹೇಳಿದರು, 'ತಿಳಿವಳಿಕೆ ಇಲ್ಲದವನಿಂದ ಯಾವುದೇ ಭರವಸೆ ಲಭಿಸುವುದಿಲ್ಲ. ನನ್ನ ರಕ್ತ ಹರಿದಿದೆ, ಆ ರಕ್ತ ಒಂದು ವೇಳೆ ದೇಶದ ಏಕತೆಯನ್ನು ಬಲಿಷ್ಠಗೊಳಿಸಲು ಸಾಧ್ಯವಾಗುವುದಾದರೆ, ಇದಕ್ಕಿಂತ ಒಳ್ಳೆಯದು ಬೇರೇನಿದೆ? ಅವನಿಗೆ ಶಿಕ್ಷೆಯನ್ನು ಕೊಡಿಸಬೇಡ. ಅವನಿಗೆ ಸದ್ಬುದ್ಧಿ ಕೊಡಲೆಂದು ದೇವರನ್ನು ಪ್ರಾರ್ಥಿಸು.'

ಹರಿಲಾಲನ ಬಾಯಿಯಿಂದ ಮಾತೇ ಹೊರಡಲಿಲ್ಲ. ಬಾಪೂ ಅವರ ಈ ವ್ಯಕ್ತಿತ್ವದ ಪರಿಚಯ ಮೊದಲ ಬಾರಿಗೆ ಸಾಕ್ಷಾತ್ಕಾರವಾಗಿತ್ತು. ಚರ್ಚಿಸುವ ವೇಳೆಯಲ್ಲಿ ಬಾಪೂ ಅದೆಷ್ಟೋ ಬಾರಿ ಧೈರ್ಯವನ್ನು ಕಳೆದುಕೊಂಡ ಪರಿವಾರದ ಎಲ್ಲಾ ಸದಸ್ಯರಿಗೆ, 'ನಿಮಗೆ ಧೈರ್ಯವಿಲ್ಲ, ನೀವು ಮೋಹಪಾಶದಲ್ಲಿ ಸಿಲುಕಿದ್ದೀರ. ನೀವು ಇಂಥ ವರ್ತನೆಯನ್ನು ಹೇಗೆ ತೋರಲು ಸಾಧ್ಯ?' ಎಂದು ಹೇಳುತ್ತಿದ್ದರು. ಇದನ್ನು ಹರಿಲಾಲ ಕಣ್ಣಾರೆ ಕಂಡಿದ್ದ. ನಂತರದಲ್ಲಿ ಬಾಪೂ ಅವರೊಂದಿಗೆ ಹೆಚ್ಚು ಚರ್ಚಿಸುವ ಅಗತ್ಯವುಂಟಾಗುತ್ತಿರಲಿಲ್ಲ. ಇವೆಲ್ಲವನ್ನು ಹೊರತು ಪಡಿಸಿ ಬಾಪೂ ಅವರ ಈ ದರ್ಶನ, ಬಾಪೂ ಒಂದು ಶಕ್ತಿ, ಈ ಶಕ್ತಿಯನ್ನು ಅರಿಯುವುದು ಖಂಡಿತ ಅಸಾಧ್ಯ ಎಂದು ಹರಿಲಾಲನಿಗೆ ಅನ್ನಿಸಿತು. ಸಾಮಾನ್ಯ ಚರ್ಚೆಯಲ್ಲಿ ತಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ಅಭಿಪ್ರಾಯವನ್ನು ಹೊಂದಿರುವ ಪರಿವಾರದ ಸದಸ್ಯರನ್ನು ಕ್ಷಮಿಸುವ ಬಾಪೂ, ತಮ್ಮ ಮೇಲೆ ಪ್ರಾಣಾಘಾತಕ ಆಕ್ರಮಣವನ್ನು ಮಾಡುವವನನ್ನು ಅದೆಷ್ಟು ಸಹಜವಾಗಿ ಕ್ಷಮಿಸುತ್ತಾರಲ್ಲ ಎಂದು ಹರಿಲಾಲನಿಗೆ ಅನ್ನಿಸಿತು. ತಾನು ಖಂಡಿತವಾಗಿಯೂ ಓರ್ವ ಅಸಾಧಾರಣ ತಂದೆಯ ಮಗ ಎಂದು ಅವನಿಗೆ ಹೆಮ್ಮೆಯಾಯಿತು.

***

## ಗಾಯಗೊಂಡ ಬಾಪೂ

ಆಕ್ರಮಣದ ವೇಳೆಯಲ್ಲಿ ಸಂಭವಿಸಿದ ಗಾಯಗಳಿಂದ ಬಾಪೂ ಕೆಲವೇ ದಿನಗಳಲ್ಲಿ